**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಸಿ.ಸಿ. 111/2021**

**ಪಿಡಬ್ಲೂ-1**

**ಸಿಡಬ್ಲೂ-1**

| | | |
|---|---|---|
| ಸಾಕ್ಷಿದಾರರ ಹೆಸರು | - | ಮಹೇಂದ್ರ ಎಮ್ ಟಿ |
| ತಂದೆಯ ಹೆಸರು | - | ತಮ್ಮ ನಾಯಕ |
| ವಯಸ್ಸು | - | 32 ವರ್ಷ |
| ಕೆಲಸ | - | ಪೊಲೀಸ್ ಪೇದೆ |
| ವಾಸ | - | ಕೆ ಆರ್ ನಗರ |

**ದಿನಾಂಕ 27.04.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ**

ಮೇ 2015 ರಿಂದ ರಿಂದ ಈ ವರೆಗೆ ಕೆ ಆರ್ ನಗರ ಪೊಲೀಸ್ ಠಾಣೆಯಲ್ಲಿ ಆಗಿ ಪೊಲೀಸ್ ಪೇದೆಯಾಗಿ ಕಾರ್ಯನಿರ್ವಹಿಸುತ್ತಿದ್ದೇನೆ.

ದಿಃ 02.06.2019 ರಂದು ಪ್ರಕರಣ ಸಂಖ್ಯೆ 200/19 ಪ್ರಕರಣದಲ್ಲಿ ಆರೋಪಿಯನ್ನು ಕೆ ಆರ್ ನಗರ ಉಪಕಾರಾಗೃಹದಲ್ಲಿ ಬಿಟ್ಟು ಬರಲು ನನ್ನನ್ನು ಹಾಗೂ ಚಾಸಾ 12 ರವರನ್ನು ನೇಮಕ ಮಾಡಿದ್ದರು. ಸದರಿ ಆರೋಪಿಯನ್ನು ಉಪಕಾರಾಗೃಹಕ್ಕೆ ಬಿಟ್ಟು ಠಾಣೆಗೆ ವಾಪಸ್ಸು ಬಂದು ವರದಿ ನೀಡಿದೆವು. ಆಗ ನನ್ನನ್ನು ಹಾಗೂ ಚಾಸಾ 2 ರವರನ್ನು ರಾತ್ರಿ ಬೀಟ್ ನ ಕರ್ತವ್ಯಕ್ಕೆ ನೇಮಕ ಮಾಡಿದರು. ಅದರಂತೆ ನಾವು ಆಂಜನೇಯ ಬ್ಲಾಕ್, ಬೋವಿ ಕಾಲೋನಿಯನ್ನು ಮುಗಿಸಿಕೊಂಡು ವಿ.ವಿ ರಸ್ತೆಗೆ ಸುಮಾರು 11.00-11.15 ಗೆ ಬಂದಾಗ ವೈರ್ ಲೆಸ್ ಮೂಲಕ ನಮಗೆ ಬಂದ ಮಾಹಿತಿ ಎಂದರೆ 2 ಹೋಟೆಲ್‌ಗಳು ತೆರೆದಿವೆ ಇನ್ನೂ ಮುಚ್ಚಿಲ್ಲ ಎಂಬ ಮಾಹಿತಿ ಬಂತು. ರಾತ್ರಿ 10 ಗಂಟೆ ಮುನ್ನ ಎಲ್ಲಾ ಅಂಗಡಿಗಳು ಮುಚ್ಚಬೇಕಾಗಿರುತ್ತದೆ.

ನಾವು ವಿವಿ ರಸ್ತೆಯಲ್ಲಿರುವ ಸಿಟಿ ಲೈಟ್ ಹೋಟೆಲ್ ಬಳಿ ಹೋಗಿ ನೋಡಲಾಗಿ ಆಹಾರ ಸರಬರಾಜು ನಡೆಯುತಿತ್ತು ನಾನು owner ನನ್ನು ಕರೆದು ಸಮಯವಾಗಿದೆ ಹೋಟೆಲ್ ಮುಚ್ಚಿ ಎಂದು ಹೇಳುತ್ತಿದ್ದಾಗ ಹೋಟೆಲ್ ಊಟ ಮಾಡುತ್ತಿದ್ದ ಸುಮಾರು 6 ಜನ ವ್ಯಕ್ತಿಗಳು ಬಂದರು. ಅವರಲ್ಲಿ ಪರಶಿವ 1 ನೇ ಆರೋಪಿ ಬಂದು ನಮ್ಮ ದುಡ್ಡು ನಮ್ಮ ಇಚ್ಚೆ ಕೇಳಲು ಪೊಲೀಸರು ನಿವ್ಯಾರು ಎಂದು ಸಮವಸ್ತ್ರದಲ್ಲಿದ್ದ ನನ್ನನ್ನು ಹಿಡಿದುಕೊಂಡು ಎಳೆದಾಡಿದ. 2 ನೇ ಆರೋಪಿ ಬಿಡಿಸುತ್ತಿದ್ದ 1 ನೇ ಆರೋಪಿ ನನ್ನ ಬಲಭಾಗದ ಕೈಗೆ ಗುದ್ದಿದ. 2 ನೇ ಆರೋಪಿ ಮುಖ ಕತ್ತಲೆ ಇದ್ದರಿಂದ ಸರಿಯಾಗಿ ಕಾಣಿಸಲಿಲ್ಲ ಆತ ನನ್ನ ಬೆನ್ನಿಗೆ ಗುದ್ದಿ ಓಡಿ ಹೋದ ಉಳಿದ 4 ಜನ ಜಗಳ ಬಿಡಿಸಿರುತ್ತಾರೆ.

ಸ್ಥಳದಲ್ಲಿ ಚರಂಡಿ ಇದ್ದು ನಾನು ಸ್ಲಿಪ್ ಆಗಿ ಕೆಳಗೆ ಬಿದ್ದೆ ಆಗ ನನ್ನ ಬೆನ್ನಿಗೆ ಹಾಗೂ ಬಲಕೈನ ಮೊಣಕೈಗೆ ಪೆಟ್ಟಾಗಿರುತ್ತದೆ. 1 ನೇ ಆರೋಪಿ ನನಗೆ ಗುದ್ದಿದಾಗ ನನಗೆ ನೋವಾಗಿರುತ್ತದೆ. ಆಗ ವೈರ್ ಲೆಸ್ ಫೋನಿನಿಂದ ಕರೆ ಮಾಡಿದಾಗ ಸ್ಥಳಕ್ಕೆ ನಮ್ಮ ಸಿಬ್ಬಂದಿಯವರಾದ ಚಾಸಾ 12, 15 ಮತ್ತು ಮತ್ತೊಬ್ಬರು ಮುಖ್ಯ ಪೇದೆ ಬಂದಿರುತ್ತಾರೆ. 1 ನೇ ಆರೋಪಿಯನ್ನು ಅವರು ಠಾಣೆಗೆ ಕರೆದುಕೊಂಡು ಹೋಗಿ ಠಾಣಾಧಿಕಾರಿಯವರ ಮುಂದೆ ಹಾಜರುಪಡಿಸಿದರು. ಪೆಟ್ಟಾಗಿದ್ದ ಕಾರಣ ನಾನು ಕೆ.ಆರ್ ನಗರದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದೆ. ಗಲಾಟೆ ಸಮಯದಲ್ಲಿ 1 ನೇ ಆರೋಪಿಯು ನನ್ನನ್ನು ಹಿಡಿದು ಎಳೆದಾಡಿದ ಕಾರಣ ನನ್ನ ಸಮವಸ್ತ್ರ ಅಂದರೆ ಶರ್ಟ್ ಜೇಬು ಹರಿದು ಹೋಗಿರುತ್ತದೆ ಹಾಗೂ ಗುಂಡಿ ಕಿತ್ತು ಹೋಗಿರುತ್ತದೆ.

ಚಿಕಿತ್ಸೆ ಪಡೆದುಕೊಂಡು ಡೈರಿ ಎಂಟ್ರಿ ಮಾಡಿಸಿ ನಾನು ಮನೆಗೆ ಹೊರಟು ಹೋದೆ ಮಾರನೆಯ ದಿನ ಬೆಳಗ್ಗೆ ಬಂದು ದೂರು ನೀಡಿದೆ. ದೂರಿನ ಮೇಲಿನ ಸಾಕ್ಷಿಯ ಸಹಿಯನ್ನು ಸಾಕ್ಷಿಯು ಗುರುತಿಸಿದ ಮೇರೆಗೆ ದೂರನ್ನು ನಿಪಿ 1 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ 1 (ಎ) ಎಂದು ಗುರುತಿಸಲಾಯಿತು.

ದಿಃ 03.06.2019 ರಂದು ಪೊಲೀಸರು ಘಟನಾ ಸ್ಥಳಕ್ಕೆ ಬಂದಾಗ ನಾನು ಪೊಲೀಸರಿಗೆ ಸ್ಥಳ ತೋರಿಸಿಕೊಟ್ಟ ಮೇರೆಗೆ ಪೊಲೀಸರು ಸ್ಥಳ ಮಹಜರು ಜರುಗಿಸಿದರು.

ಸ್ಥಳದಲ್ಲಿದ್ದ ಒಂದು ನನ್ನ ಶರ್ಟ್ ಬಟನ್ ಹಾಗೂ ಬಟನ್ ಗೆ ಹಾಕುವ ಒಂದು ಗೋಲ್ಡ ಕಲರ್ ನ ರಿಂಗ್‌ನ್ನು ಪೊಲೀಸರ ವಶಕ್ಕೆ ನೀಡಿದೆ. ಶರ್ಟ್ ನ್ನು ಸಹ ಅದೇ ಸಮಯದಲ್ಲಿ ಹಾಜರುಪಡಿಸಿದೆ. ಪೊಲೀಸರು ಅವುಗಳನ್ನು ಮಹಜರು ಮೂಲಕ ವಶಪಡಿಸಿಕೊಂಡರು. ಸ್ಥಳ ಮಹಜರಿನ ಮೇಲಿನ ಸಾಕ್ಷಿಯ ಸಹಿಯನ್ನು ಸಾಕ್ಷಿಯು ಗುರುತಿಸಿದ ಮೇರೆಗೆ ಸ್ಥಳಮಹಜರನ್ನು  ನಿಪಿ 2 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ 2 (ಎ) ಎಂದು ಗುರುತಿಸಲಾಯಿತು.

ನನ್ನ ಶರ್ಟ್ ಬಟನ್ ಹಾಗೂ ಶರ್ಟ್ ನ ಬಟನ್ ರಿಂಗ್ ನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಒಂದು ಖಾಕಿ ಶರ್ಟ್ ನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದರಲ್ಲಿ ಕಾಣುವ ನಾಮಫಲಕವು ನನ್ನದೆ ಎಂದು ನುಡಿದುಡಿರುತ್ತಾರೆ ಅದನ್ನು ಮು.ಮಾ 1 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಒಂದು ಶರ್ಟ್ ನ ಬಟನ್ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಮು.ಮಾ 2 ಎಂದು ಗುರುತಿಸಲಾಯಿತು. ಒಂದು ಗೋಲ್ಡನ್ ರಿಂಗ್ ನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಮು.ಮಾ 3 ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ಸ್ಥಳದಲ್ಲಿ ಯಾವ ಯಾವ ಕಡೆ ಏನು ಏನು ಎಂದು ಬರೆದು ಕೊಂಡು ನನ್ನ ಸಹಿ ಪಡೆದರು. 1 ನೇ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. 2 ನೇ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಲು ವಿಫಲಗೊಂಡಿರುತ್ತಾರೆ.

ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.

**ಪಾಟೀ ಸವಾಲು ಮಾನ್ಯ ಎಪಿಪಿಯವರಿಂದಃ**

1 ನೇ ಆರೋಪಿಯು ನನ್ನನ್ನು ಕುರಿತು " ಬೊ... ಹಾಗೂ ಸು... ಮಗನೇ " ಎಂದು ಅವಾಚ್ಯ ಶಬ್ದಗಳಿಂದ ಬೈದ ಎಂದರೆ ಸರಿ.  1 ಮತ್ತು 2 ನೇ ಆರೋಪಿತರು ಇಬ್ಬರೂ ಸೇರಿಕೊಂಡು ನನ್ನ ಬಲಭುಜಕ್ಕೆ ಹಾಗೂ ನನ್ನ ಬಲಕೈನ wrist ಬಳಿ ಹೊಡೆದು ನೋವುಂಟು ಮಾಡಿದರು ಎಂದರೆ ಸರಿ. 2 ನೇ ಆರೋಪಿ ಕೈಯಿಂದ ಜಾಡಿಸಿ ನನ್ನನ್ನು ತಳ್ಳಿದಾಗ ನಾನು ಕೆಳಗೆ ಬಿದ್ದೆ ಎಂದರೆ ಸರಿ.  ಆಗ ನನಗೆ ಬಲಗಾಲಿಗೆ ಪೆಟ್ಟಾಯಿತು ಎಂದರೆ

ಸರಿ. ಚಾಸಾ 3 ರಿಂದ 5 ರವರು ಜಗಳ ಬಿಡಿಸಿದರು ಎಂದರೆ ಸರಿ. ಈ ರೀತಿ ಆರೋಪಿತರು ನನಗೆ ಹೊಡೆದ್ದರಿಂದ ನನ್ನ ಕರ್ತವ್ಯಕೆ ತೊಂದರೆಯಾಗಿದೆ ಎಂದರೆ ಸರಿ. ನ್ಯಾಯಾಲಯದ ಮುಂದಿರುವ 2 ನೇ ಆರೋಪಿಯೇ ನನಗೆ ಹಲ್ಲೆ ಮಾಡಿದ ಆರೋಪಿ ಎಂದರೆ ಕತ್ತಲೆಯಿದ್ದ ಕಾರಣ ನನಗೆ ಕಾಣಲಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ.

ಸ್ಥಳಕ್ಕೆ ಮಹಜರಿಗೆ ಬಂದಾಗ ಪೊಲೀಸರು ಸ್ಥಳದಲ್ಲಿ ನಕ್ಷೆ ತಯಾರಿಸಿದರು ಎಂದರೆ ಸರಿ. ನಕ್ಷೆ ಮೇಲಿನ ಸಾಕ್ಷಿಯ ಸಹಿಯನ್ನು ಸಾಕ್ಷಿಯು ಗುರುತಿಸಿದ ಮೇರೆಗೆ ನಕ್ಷೆಯನ್ನು ನಿಪಿ 3 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ 3(ಎ) ಎಂದು ಗುರುತಿಸಲಾಯಿತು. 2 ನೇ ಆರೋಪಿಯ ನನಗೆ ಹಲ್ಲೆ ಮಾಡಿದರು ಸಹ ಅವರಿಗೆ ಸಹಾಯವಾಗಲೆಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕತ್ತಲೆ ಆಗಿದ್ದ ಕಾರಣ ಅವರನ್ನು ಗುರುತಿಸಲು ಆಗಲಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ.

**<u>ಪಾಟೀ ಸವಾಲು ಶ್ರೀ ಹೆಚ್ ಕೆ ಸಿ ಆರೋಪಿಪರ ವಕೀಲರುಃ</u>**

ಕೆ ಅರ್ ನಗರ ಪೊಲೀಸ್ ಠಾಣೆಗೆ ಸಂಬಂಧಪಟ್ಟಂತೆ ರಾತ್ರಿ ಬೀಟ್ ಒಟ್ಟು 4 ಇದೆ. 2 ನೇ ಬೀಟ್ ಗೆ ವಿ.ವಿ ರಸ್ತೆ ಸಂಪೂರ್ಣ ಒಳಪಡುತ್ತದೆ. ಮೈಸೂರಿನಿಂದ ಹಾಸನಕ್ಕೆ ಹೋಗುವ ಕಡೆಗೆ ಬರುವ ವಿವಿ ರಸ್ತೆಯ ಎಡಭಾಗಕ್ಕೆ 3 ನೇ ಬೀಟ್ ಸರಹದ್ದು ಬರುತ್ತದೆ ಎಂದರೆ ಸರಿಯಲ್ಲ. ವೈರ್ ಲೆಸ್ ಮುಖಾಂತರ ಮುಚ್ಚಿಸಿ ಎಂದು ಬಂದ ಮಾಹಿತಿಯನ್ನು ನಿಪಿ 1 ರಲ್ಲಿ ನಮೂದಿಸಿಲ್ಲ. ಸಿಟಿ ಲೈಟ್ ಹೋಟೆಲ್ ಗೆ ಹೋದಾಗ ಸಮಯ ರಾತ್ರಿ 11 ಆಗಿತ್ತು. ಹೋಟೆಲ್ ಒಳಗಿನಿಂದ ಬಂದ 6 ಜನ ಹೊರತುಪಡಿಸಿ ಸ್ಥಳದಲ್ಲಿ ಬೇರೆ ಯಾರು ಇರಲಿಲ್ಲ. ಸ್ಥಳದಲ್ಲಿ 1 ನೇ ಆರೋಪಿ ಹಾಗೂ ನನ್ನ ನಡುವೆ ಯಾವುದೇ ಮಾತಕತೆ ಆಗಿಲ್ಲ ಹಾಗೂ ಆತ ನನ್ನ ಮೇಲೆ ಯಾವುದೇ ಗಲಾಟೆ ಮಾಡಿಲ್ಲ ಎಂದರೆ ಸರಿಯಲ್ಲ. ಆತ ನನ್ನ ಸಮವಸ್ತ್ರ ಹರಿದು ಹಾಕಿಲ್ಲ ಎಂದರೆ ಸರಿಯಲ್ಲ. ಸ್ಥಳದಿಂದ ನಾನು ನೇರವಾಗಿ ಆಸ್ಪತ್ರೆಗೆ ಹೋಗಿದ್ದೆ. ಆಗ ಸಮಯ ಸುಮಾರು 12.30 ಆಗಿರಬಹುದು. ಆ ದಿನ ನಾನು ಆಸ್ಪತೆಯಿಂದ ಠಾಣೆಗೆ ಬಂದು ಡೈರಿ ಎಂಟ್ರಿ ಮಾಡಿ ನನ್ನ ಕೈಯಲ್ಲಿ ಕೆಲಸ ಮಾಡಲು ಆಗದ ಇರುವ ಕಾರಣ ಮನೆಗೆ ಹೋದೆ. ಈ ಎಲ್ಲಾ ಹೇಳಿಕೆಯನ್ನು ನಾನು ಠಾಣಾ ಅಧಿಕಾರಿಗೆ ತಿಳಿಸಿದ್ದೆ.

ಅದೇ ದಿನ ದೂರು ಕೊಡಲು ಏನು ತೊಂದರೆ ಇತ್ತು ಎಂದರೆ ನನಗೆ ಅ ದಿನ ಆರೋಗ್ಯ ಸರಿ ಇರಲಿಲ್ಲ ಆದ್ದರಿಂದ ಮನೆಗೆ ಹೋದೆ, ಮಾರನೆಯ ದಿನ ದೂರು ನೀಡಿದೆ. ಘಟನೆ ನಡೆದಿದೆ ಎಂದು ಹೇಳುವ ಒಂದು ವಾರಕ್ಕೂ ಮುನ್ನ ಕೆ ಆರ್ ನಗರದ ಮುನಿಸಿಪಾಲಿಟಿ ಚುನಾವಣೆ ಇತ್ತು ಎಂದರೆ ಸರಿ. ಅದರ ಫಲಿತಾಂಶ ಘಟನೆ ನಡೆಯುತ್ತಿದೆ ಎಂದು ಹೇಳಿದ 2 ದಿನಕ್ಕೂ ಮುಂಚೆ ಬಂದಿದೆ ಎಂದರೆ ನನಗೆ ಬಂದಿಲ್ಲ. ಘಟನೆ ನಡೆದಿದೆ ಎಂದು ಹೇಳಿದ ದಿನದಂದೂ ಯಾವುದೇ ಘಟನೇ ನಡೆಯದೇ ಇದ್ದರೂ ಸಹ 1 ನೇ ಆರೋಪಿಯ ಮೇಲೆ ದೂರು ದಾಖಲಿಸಬೇಕು ಎಂಬ ಉದ್ದೇಶದಿಂದ ನಾನು ಮಾರನೆಯ ದೂರು ನೀಡಿದ್ದೇನೆ ಎಂದರೆ ಸರಿಯಲ್ಲ.

ಅ ದಿನ ಸಿಟಿ ಲೈಟ್ ಹೋಟೆಲ್ ನಲ್ಲಿ ಊಟ ಮಾಡಿದ್ದು ಬಿಲ್ ಕೊಡುವ ವಿಷಯದಲ್ಲಿ ನನಗೂ ಹಾಗೂ ಓನರ್ ಗೂ ಮಾತುಕತೆ ಆಗುವ ಸಮಯದಲ್ಲಿ ಒಂದನೇ ಆರೋಪಿ ಹಾಗೂ ನನಗೊ ಮಾತುಕತೆ ಆಗಿದೆ ಎಂದರೆ ಸರಿಯಲ್ಲ. ಅ ದಿನ ಚಾಸಾ 3 ರಂದ 5 ರವರು ಬಂದು ಜಗಳ ಬಿಡಿಸಿಲ್ಲ ಏಕೆಂದರೆ ಆ ದಿನ ಯಾವುದೇ ಗಲಾಟೆ ಆಗಿಲ್ಲ ಎಂದರೆ ಸರಿಯಲ್ಲ. ಮಹಜರು ಮಾಡುವಾಗ ಚಾಸಾ 5 ಮತ್ತು 6 ಇದ್ದರು. ಮಹಜರ್ ಬರೆದಿದ್ದು ಚಾಸಾ 19. ನಾನು ಠಾಣಾ ಸಿಬ್ಬಂದಿಯಾಗಿರುವುದರಿಂದ ನಿಪಿ 2 ನ್ನು ಸ್ಥಳದಲ್ಲಿ ಬರೆಯದೇ ಇದ್ದರೂ ಸಹ ಠಾಣೆಯಲ್ಲಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

ಮು.ಮಾ 2 ಮತ್ತು 3 ಸ್ಥಳದಲ್ಲಿ ದೊರೆತಿಲ್ಲ ಅವುಗಳನ್ನು ನಾನು ಉದ್ದೇಶಪೂರ್ವಕವಾಗಿ ತನಿಖಾಧಿಕಾರಿಗೆ ನೀಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಬಳಿ ರೈಫಲ್ ಇತ್ತು ಎಂದು ನಾನು ದೂರಿನಲ್ಲಿ ಹೇಳಿಲ್ಲ. ಸಾಕ್ಷಿಯು ಮುಂದುವರೆದು ರಾತ್ರಿ ಬೀಟ್ ನಲ್ಲಿ ರೈಫಲ್ ತೆಗೆದುಕೊಂಡೇ ಹೋಗುತ್ತೇವೆ ಎಂದು ನುಡಿಯುತ್ತಾರೆ. ಚಾಸಾ 3 ರಿಂದ 5 ರವರು ಘಟನೆ ನಡೆಯುತ್ತಿರುವಾಗ ಕೊನೆಯ ಘಟ್ಟದಲ್ಲಿ ಬಂದು ಬಿಡಿಸಿದರು. 1 ಅರೋಪಿ ನನಗೆ ಅ ದಿನದಂದು ಹಲ್ಲೆ ಮಾಡಿಲ್ಲ ಹಾಗೂ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಹಾಗೂ ನನ್ನ ಕರ್ತವ್ಯಕ್ಕೆ ಅಡ್ಡಿಪಡಿಸಿಲ್ಲದೆ ಇದ್ದರು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸಿಟಿ ಲೈಟ್ ಹೋಟೆಲ್ ಅ ದಿನ ನನ್ನ ಬೀಟ್ ವ್ಯಾಪ್ತಿಗೆ ಬಾರದೆ ಇದ್ದರೂ ಸಹ ನಾನು ಉದ್ದೇಶಪೂರ್ವಕವಾಗಿ ಹೋಗಿದ್ದೆ ಎಂದರೆ ಸರಿಯಲ್ಲ. ಆರೋಪಿಯನ್ನು ಸ್ಥಳದಿಂದ ಕರೆದುಕೊಂಡು ಹೋಗಿ ಏನು ಮಾಡಿದರು ಗೊತ್ತಿಲ್ಲ. 1 ನೇ ಆರೋಪಿಯ ವಿರುದ್ಧ ದ್ವೇಷವಿದ್ದ ಕಾರಣ ಅವರ ವಿರುದ್ಧ ಸುಳ್ಳು ದೂರನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ</u> – ಇರುವುದಿಲ್ಲ

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಪವಿತ್ರ ಆರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ